**ಪಿ.ಡಬ್ಲ್ಯೂ-1**

**ದಿಃ 10.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ TYH ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.300/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ MMV ವಕೀಲರಿಂದ**

ನನ್ನ ತಂದೆಯ ಪೂರ್ಣ ಹೆಸರು ರಾಮು ಯಶವಂತ ಗಾವಡಾ. ಯಶವಂತ ಬಾಬು ಗಾವಡಾ ನನ್ನ ಅಜ್ಜ. ನನ್ನ ಅಜ್ಜನಿಗೆ 5 ಜನ ಗಂಡುಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು. ಸದರಿ ಗಂಡು ಮಕ್ಕಳ ಹೆಸರು ಬಾಬು ಯಶವಂತ ಗಾವಡಾ , ಪಾಂಡುರಂಗ ಯಶವಂತ ಗಾವಡಾ, ಮುನಾಫಾ ಯಶವಂತ ಗಾವಡಾ, ಪರಶುರಾಮ ಯಶವಂತ ಗಾವಡಾ ಮತ್ತು ತುಕಾರಾಮ ಯಶವಂತ ಗಾವಡಾ ಮತ್ತು ಹೆಣ್ಣು ಮಕ್ಕಳ ಹೆಸರು ಸುಂದರಾಬಾಯಿ, ತುಳಸಾಬಾಯಿ ಮತ್ತು ಇಂಗುಬಾಯಿ.

2. ನಾನು ಪಾಂಡು ಯಶವಂತ ಗಾವಡಾ ಮತ್ತು ಇತರರ ಮೇಲೆ ಕೇಸು ದಾಖಲಿಸಿದ್ದೇನೆ. ಪ್ರತಿವಾದಿಗಳು ನನ್ನ ಸಂಬಂಧಿಕರು. ನಮ್ಮ ಜಮೀನಿನ ಸಲುವಾಗಿ ಕೇಸು ಹಾಕಿದ್ದೇನೆ. ನನ್ನ ಜಮೀನಿನ ಸರ್ವೆ ನಂಬರ ಹೇಳಲು ಆಗುವುದಿಲ್ಲ. ನಾನು 1ನೇ ತರಗತಿಯವರೆಗೆ ಮರಾಠಿಯಲ್ಲಿ

ಓದಿದ್ದೇನೆ. ನನ್ನ ತಂದೆ 2005 ರಲ್ಲಿ ಮೃತ ಪಟ್ಟಿದ್ದಾರೆ. ನನ್ನ ತಾಯಿಯ ಹೆಸರು ಲಕ್ಷ್ಮಿಬಾಯಿ ರಾಮು ಗಾವಡಾ. ನನ್ನ ತಾಯಿ 7 ವರ್ಷಗಳ ಹಿಂದೆ ಮೃತ ಪಟ್ಟಿದ್ದಾರೆ.

3. ನನ್ನ ತಾಯಿ ಮೃತ ಪಟ್ಟ ನಂತರ ವಾರಸಾ ಪಡೆದುಕೊಂಡಿದ್ದೇನೆ. ನನ್ನ ದಾವಾ ಆಸ್ತಿಯ ಬಗ್ಗೆ ಪೂರ್ಣ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯ ನನಗೆ ಮಾಹಿತಿ ಇಲ್ಲ. ನಾನು ನನ್ನ ಮುಖ್ಯ ವಿಚಾರಣೆ ಹಾಗೂ ವಾದ ಪತ್ರ ತಯಾರಿಸಲು ಮಾಹಿತಿ ನೀಡಿಲ್ಲ, ನಾನು ಸಹಿ ಮಾತ್ರ ಮಾಡಿದ್ದೇನೆ. ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ.

4. ದಾವಾ ಆಸ್ತಿಯಲ್ಲಿ ನಾನು ಒಬ್ಬನೇ ಸ್ವಾಧೀನ ಇದ್ದೇನೆ. ದಾವಾ ಸ್ವತ್ತಿನಲ್ಲಿ ನಾನು ಮಾತ್ರ ಮನೆ ಕಟ್ಟಿದ್ದೇನೆ. ನನ್ನ ಜೊತೆಗೆ ಪರಶುರಾಮ ಗಾವಡಾ ಸಹ ಬಂದಿದ್ದಾರೆ. ಸದರಿ ಪರಶುರಾಮ ನನ್ನ ಚಿಕ್ಕಪ್ಪ.

**ಮುಂದುವರೆದ ಪಾಟೀ ಸವಾಲು:** ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.